# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ ಆವರಣ, ಬೆಂಗಳೂರು –560056.

ಸಂಖ್ಯೆ: ವಿ.ಕಾ.ಶಾ–1/ಶೈ.ವೇ.ಪ./ಸ್ನಾತಕ/2022–23

ದಿನಾಂಕ:20.09.2022

**ಸುತ್ತೋಲೆ–6**

ವಿಷಯ: 2022–23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ ದಂಡ ರಹಿತವಾಗಿ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಇಡಿ/217/ಯುಎನ್ಇ/2022, ಬೆಂಗಳೂರು, ದಿನಾಂಕ:09.07.2022.

2. ವಿ.ವಿ. ಅಧಿಸೂಚನೆ ಸಂಖ್ಯೆ:Aca-I/A1/UG-Calendar of Events/2022-23 dated:18.07.2022
3. ಸುತ್ತೋಲೆ ಸಂಖ್ಯೆ: ವಿ.ಕಾ.ಶಾ–1/ಶೈ.ವೇ.ಪ./ಸ್ನಾತಕ/2022–23, ದಿನಾಂಕ: 08.08.2022, 17.08.2022, 22.08.2022 ಮತ್ತು 17.09.2022.
4. ಕುಲಪತಿಗಳ ಅನುಮೋದನೆ ದಿನಾಂಕ: 20.09.2022.

** * **

ಉಲ್ಲೇಖ (1) ರ ಸರ್ಕಾರದ ಆದೇಶಾನುಸಾರ ಮತ್ತು ಉಲ್ಲೇಖ (2 ಮತ್ತು 3) ರಲ್ಲಿ ನಮೂದಿಸಿರುವ ವಿಶ್ವವಿದ್ಯಾಲಯದ ಶೈಕ್ಷಣಿಕ ವೇಳಾಪಟ್ಟಿಯ ಅಧಿಸೂಚನೆ ಹಾಗೂ ಸುತ್ತೋಲೆಯಲ್ಲಿ 2022–23ನೇ ಸಾಲಿನ ಪ್ರಥಮ ವರ್ಷದ ಪ್ರವೇಶಾತಿಗೆ ದಿನಾಂಕ: 20.09.2022ಕ್ಕೆ ದಂಡ ರಹಿತವಾಗಿ ಅಂತಿಮ ದಿನಾಂಕವನ್ನು ನಿಗಧಿಪಡಿಸಲಾಗಿತ್ತು.

ಮುಂದುವರೆದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರವೇಶಾತಿಗೆ ಅಂತಿಮ ದಿನಾಂಕದ ಅವಧಿ ವಿಸ್ತರಣೆ ಅನಿವಾರ್ಯವಾಗಿರುವ ಹಿನ್ನೆಲೆಯಲ್ಲಿ **ಪ್ರಥಮ ವರ್ಷದ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಗೆ ಕೊನೆಯ ದಿನಾಂಕವನ್ನು ದಂಡ ರಹಿತವಾಗಿ ದಿನಾಂಕ: 30.09.2022ರವರೆಗೆ** ವಿಸ್ತರಿಸಲಾಗಿದೆ.

ಈ ಅವಧಿ ವಿಸ್ತರಣೆಯಿಂದಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ನಿಗದಿತ ಹಾಜರಾತಿ ಪಡೆಯಲು ವಿಶೇಷ ತರಗತಿಗಳನ್ನು ನಡೆಸುವುದು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಜವಾಬ್ದಾರಿಯಾಗಿರುತ್ತದೆ.

ಆದೇಶಾನುಸಾರ

ಕುಲಸಚಿವರು

ಇವರಿಗೆ,

1. ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
2. ಸಂಯೋಜಕರು, ಬಿ.ಎ./ಬಿ.ಎಸ್ಸಿ/ಬಿಬಿಎ/ಬಿ.ಕಾಂ. (ಹಾನರ್ಸ್) ಕೋರ್ಸುಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056.

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056.
2. ನೋಡಲ್ ಅಧಿಕಾರಿಗಳು, ಯು.ಯು.ಸಿ.ಎಂ.ಎಸ್., ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56
3. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056.
4. ಕಛೇರಿ ಪ್ರತಿ.